**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 99/2019**

**ಚಾ.ಸಾ–2**

**ಫ್ರಾ.ಸಾ –1**

**ಸಾಕ್ಷಿಗೆ ದಿನಾಂಕ 25.08.2022 ರಂದು ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಃ | ಮಹಿಬೂಬ ಅಕ್ಕಲಕೋಟ |
| ತಂದೆಯ ಹೆಸರು | ಃ | ಲಾಲ ಅಹ್ಮದ |
| ವಯಸ್ಸು | ಃ | 35–ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಗಂವಾರ |

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ಆರೋಪಿ ಗೊತ್ತು. ಆರೋಪಿ ನಮ್ಮ ಗ್ರಾಮದವರು. ಚಾಸಾ–3 ನಾಗಪ್ಪ ಗೊತ್ತು.

ಸಾಕ್ಷಿಗೆ ಒಂದು ದಾಖಲಾತಿ ಸಾಕ್ಷಿಗೆ ತೋರಿಸಲಾಗಿ ಅದು ಅಮಾನತ್ತು ಪಂಚನಾಮೆಯಾಗಿದ್ದು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ–1 ಎಂದು ಸಾಕ್ಷಿ ಸಹಿಯನ್ನು ನಿಪಿ–1(ಎ) ಎಂದು ಗುರ್ತಿಸಲಾಯಿತು. ನಿಪಿ–1 ರಲ್ಲಿ ಬರೆದಂತಹ ವಿಚಾರಗಳು ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ಸುಮಾರು 4–ವರ್ಷಗಳ ಹಿಂದೆ ಜೇವರ್ಗಿ ಪೋಲಿಸ ಠಾಣೆ ಬಳಿ ಸಹಿ ಮಾಡಿರುತ್ತಾರೆ. ಪೋಲಿಸರು ನನ್ನ ಸಮಕ್ಷಮ ಯಾವುದೆ ಸಾರಾಯಿ ಪೌಚಗಳನ್ನು ವಶಪಡಿಸಿಕೊಂಡಿಲ್ಲ. ಪೋಲಿಸರು ನಿಪಿ–1 ದಾಖಲೆಯಲ್ಲಿ ಬರೆದಂತಹ ವಿಚಾರಗಳನ್ನು ನನಗೆ ಓದಿ ಹೇಳಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು

ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ದಿನಾಂಕ 19.11.2017 ರಂದು ರಾತ್ರಿ 8.00 ರಿಂದ 9.00 ಗಂಟೆವರೆಗೆ ಗಂವಾರ ಗ್ರಾಮದ ಬಸನಿಲ್ದಾಣದ ಹತ್ತಿರ ಪೋಲಿಸರು ನನ್ನ ಮತ್ತು ಚಾಸಾ–3 ರವರ ಸಮಕ್ಷಮ ನಿಪಿ–1 ರಂತೆ ಗುನ್ನಾ ಜಾಗೆ ಪಂಚನಾಮೆ ಜರುಗಿಸಿರುತ್ತಾರೆಂದರೆ ಸರಿಯಲ್ಲ. ಗುನ್ನಾ ಜಾಗವನ್ನು ಚಾಸಾ 1 ರವರು ನನಗೆ ಮತ್ತು ಚಾಸಾ–3 ರವರಿಗೆ ತೋರಿಸಿರುತ್ತಾರೆಂದರೆ ಸರಿಯಲ್ಲ. ಪೋಲಿಸರು ಪಂಚನಾಮೆ ಜರುಗಿಸುವ ಸಮಯದಲ್ಲಿ 30 ಸಾರಾಯಿ ಪೌಚಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದ ವಿಚಾರವಾಗಿ ನಿಪಿ–1 ಪಂಚನಾಮೆಯನ್ನು ಪೋಲಿಸರು ಜರುಗಿಸಿರುತ್ತಾರೆಂದರೆ ಎಂದರೆ ಸರಿಯಲ್ಲ. ಪ್ರಕರಣದ ಎಲ್ಲ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್.ಎ.ಪಿ. ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಅಂತಾ ತಿಳಿಸಿರುತ್ತಾರೆ.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂಡಾಧಿಕಾರಿಗಳು
ಜೇವರಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 99/2019**

**ಚಾ.ಸಾ-3**

**ಪ್ರಾ.ಸಾ-2**

**ಸಾಕ್ಷಿಗೆ ದಿನಾಂಕ 25.08.2022 ರಂದು ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಃ | ನಾಗಪ್ಪ |
| ತಂದೆಯ ಹೆಸರು | ಃ | ಈರಣ್ಣ ಸುಗೂರ |
| ವಯಸ್ಸು | ಃ | 40-ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಗಂವಾರ |

**<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ</u>**

ಆರೋಪಿ ಗೊತ್ತು. ಆರೋಪಿ ನಮ್ಮ ಗ್ರಾಮದವರು. ಚಾಸಾ-2 ಮಹಬೂಬ ಗೊತ್ತು.

ಸಾಕ್ಷಿಗೆ ಒಂದು ದಾಖಲಾತಿ ಸಾಕ್ಷಿಗೆ ತೋರಿಸಲಾಗಿ ಅದು ಅಮಾನತ್ತು ಪಂಚನಾಮೆಯಾಗಿದ್ದು ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರ್ತಿಸಲಾಯಿತು. ನಿಪಿ-1 ರಲ್ಲಿ ಬರೆದಂತಹ ವಿಚಾರಗಳು ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ಸುಮಾರು 5-6 ವರ್ಷಗಳ ಹಿಂದೆ ಗಂವಾರ ಗ್ರಾಮದಲ್ಲಿ ಸಹಿ ಮಾಡಿರುತ್ತಾರೆ. ನಿಪಿ-1 ದಾಖಲೆಗೆ ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ಪೋಲಿಸರು ನನ್ನ ಸಮಕ್ಷಮ ಯಾವುದೆ ಸಾರಾಯಿ ಪೌಚಗಳನ್ನು ವಶಪಡಿಸಿಕೊಂಡಿಲ್ಲ. ಪೋಲಿಸರು ನಿಪಿ-1 ದಾಖಲೆಯಲ್ಲಿ ಬರೆದಂತಹ ವಿಚಾರಗಳನ್ನು ನನಗೆ ಓದಿ ಹೇಳಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>**

ದಿನಾಂಕ 19.11.2017 ರಂದು ರಾತ್ರಿ 8.00 ರಿಂದ 9.00 ಗಂಟೆವರೆಗೆ ಗಂವಾರ ಗ್ರಾಮದ ಬಸನಿಲ್ದಾಣದ ಹತ್ತಿರ ಪೋಲಿಸರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿಪಿ-1 ರಂತೆ ಗುನ್ನಾ ಜಾಗೆ ಪಂಚನಾಮೆ ಜರುಗಿಸಿರುತ್ತಾರೆಂದರೆ ಸರಿಯಲ್ಲ. ಗುನ್ನಾ ಜಾಗವನ್ನು ಚಾಸಾ 1 ರವರು ನನಗೆ ಮತ್ತು ಚಾಸಾ-2 ರವರಿಗೆ ತೋರಿಸಿರುತ್ತಾರೆಂದರೆ ಸರಿಯಲ್ಲ. ಪೋಲಿಸರು ಪಂಚನಾಮೆ ಜರುಗಿಸುವ ಸಮಯದಲ್ಲಿ 30 ಸಾರಾಯಿ ಪೌಚಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದ ವಿಚಾರವಾಗಿ ನಿಪಿ-1 ಪಂಚನಾಮೆಯನ್ನು ಪೋಲಿಸರು ಜರುಗಿಸಿರುತ್ತಾರೆಂದರೆ ಎಂದರೆ ಸರಿಯಲ್ಲ. ಪ್ರಕರಣದ ಎಲ್ಲ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಎಸ್.ಎ.ಪಿ. ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಅಂತಾ ತಿಳಿಸಿರುತ್ತಾರೆ.</u>**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂಡಾಧಿಕಾರಿಗಳು
ಜೇವರಗಿ